Volume 3, Issue 6, June 2017 ISSN NO: 2454 - 2326

# North Asian International Research Journal Consortium

## North Asian International Research Journal Of Multidisciplinary

Chief Editor
Dr. Nisar Hussain Malik

Publisher
Dr. Bilal Ahmad Malik

Associate Editor
Dr.Nagendra Mani Trapathi

CIF IMPACT FACTOR: 4.465

NAIRJC JOURNAL PUBLICATION

North Asian International Research Journal Consortium

# Welcome to NAIRJC

ISSN NO: 2454 - 2326

North Asian International Research Journal is a multidisciplinary research journal, published monthly in English, Hindi, Urdu all research papers submitted to the journal will be double-blind peer reviewed referred by members of the editorial board. Readers will include investigator in Universities, Research Institutes Government and Industry with research interest in the general subjects

## Editorial Board


| | | |
|---|---|---|
| J.Anil Kumar<br>Head Geography University of Thirvanathpuram | Sanjuket Das<br>Head Economics Samplpur University | Adgaonkar Ganesh<br>Dept. of Commerce, B.S.A.U Aruganbad |
| Kiran Mishra<br>Dept. of Engligh,Ranchi University, Jharkhand | Somanath Reddy<br>Dept. of Social Work, Gulbarga University. | Rajpal Choudhary<br>Dept. Govt. Engg. College Bikaner Rajasthan |
| R.D. Sharma<br>Head Commerce & Management Jammu University | R.P. Pandday<br>Head Education Dr. C.V.Raman University | Moinuddin Khan<br>Dept. of Botany SinghaniyaUniversity Rajasthan. |
| Manish Mishra<br>Dept. of Engg, United College Ald.UPTU Lucknow | K.M Bhandarkar<br>Praful Patel College of Education, Gondia | Dr. Ashish Kumar<br>Department of Management Studies L.N.Mithila University Darbhanga , Bihar |
| Tihar Pandit<br>Dept. of Environmental Science, University of Kashmir. | Simnani<br>Dept. of Political Science, Govt. Degree College Pulwama, University of Kashmir. | Ashok D. Wagh<br>Head PG. Dept. of Accountancy, B.N.N.College, Bhiwandi, Thane, Maharashtra. |
| Neelam Yaday<br>Head Exam. Mat.K..M .Patel College Thakurli (E), Thane, Maharashtra | Nisar Hussain<br>Dept. of Medicine A.I. Medical College (U.P) Kanpur University | M.C.P. Singh<br>Head Information Technology Dr C.V. Rama University |
| Ashak Husssain<br>Head Pol-Science G.B, PG College Ald. Kanpur University | Khagendra Nath Sethi<br>Head Dept. of History Sambalpur University. | Rama Singh<br>Dept. of Political Science A.K.D College, Ald.University of Allahabad |


**Address: -North Asian International Research Journal Consortium (NAIRJC) 221 Gangoo, Pulwama, Jammu and Kashmir, India -192301, Cell: 09086405302, 09906662570, Ph. No: 01933-212815, Email:** nairjc5@gmail.com, info@nairjc.com **Website:** www.nairjc.com

North Asian International Research Journal of Multidisciplinary ISSN: 2454 - 2326 Vol. 3, Issue 6, June 2017

CIF IMPACT FACTOR: 4.465

# ಖಾನಾಪುರ ತಾಲೂಕಿನ ಮಾಸ್ತಿಗಲ್ಲುಗಳು

## *(Mastistones of Khanapur Taluka)*

**ಶ್ರೀ ಸೂರ್ಯಕಾಂತ ಪಿ.ಕೊಕಟನೂರ**
ಪಿ.ಎಚ್.ಡಿ ಸಂಶೋಧನಾ ಅಭ್ಯರ್ಥಿ
ರಾಣಿ ಚನ್ನಮ್ಮ ವಿಶ್ವವಿದ್ಯಾಲಯ ಸ್ನಾತಕೋತ್ತರ ಕೇಂದ್ರ,
ಇತಿಹಾಸ ವಿಭಾಗ, ತೊರವಿ, ವಿಜಯಪುರ

**ಡಾ.ಕೆ.ಎಲ್.ಎನ್.ಮೂರ್ತಿ,** ಮಾರ್ಗದರ್ಶಕರು
ಸಹ ಪ್ರಾಧ್ಯಾಪಕರು ಮತ್ತು ಮುಖ್ಯಸ್ಥರು ,ಇತಿಹಾಸ ವಿಭಾಗ
ರಾಣಿ ಚನ್ನಮ್ಮ ವಿಶ್ವವಿದ್ಯಾಲಯ ಸ್ನಾತಕೋತ್ತರ ಕೇಂದ್ರ
ತೊರವಿ, ವಿಜಯಪುರ

**ಪೀಠಿಕೆ:**

ಪ್ರಾಚೀನ ಭಾರತದ ಜನಾಂಗಗಳಲ್ಲಿ ರೂಢಿಯಲ್ಲಿದ್ದ ಒಂದು ಪದ್ಧತಿಯೆಂದರೆ ಅದು ಮಾಹಾಸತಿ ಆಚರಣೆ. ಅಂದರೆ ಸತ್ತ ಗಂಡನ ಜೊತೆ ಆತನ ಪತ್ನಿಯೂ ಚಿತೆಯೇರುವುದು ಅಥವಾ ಪ್ರಾಣ ತ್ಯಾಗ ಮಾಡಿಕೊಳ್ಳುವುದು.ಇದು ಅನಾದಿಕಾಲದಿಂದಲೂ ನಮ್ಮಲ್ಲಿ ನಡೆದುಕೊಂಡು ಬಂದಂತ ಪದ್ಧತಿಯಾಗಿದೆ. ಕರ್ನಾಟಕ ಸೇರಿದಂತೆ ದೇಶದ ನಾನಾ ಭಾಗಗಳಲ್ಲಿ ಇದರ ಆಚರಣೆ ರೂಢಿಯಲ್ಲಿತ್ತೆಂದು ತಿಳಯುತ್ತದೆ.ಪ್ರಾಚೀನ ಜನಾಂಗಗಳು ಈ ಲೋಕದಂತಹ ಇನ್ನೊಂದು ಲೋಕವಿರಬಹುದೆಂದು ಬಹು ದೃಢವಾಗಿ ನಂಬಿದ್ದರು.ವ್ಯಕ್ತಿ ಮಡಿದಾಗ ಅವನು ಆ ಪರಲೋಕಕ್ಕೆ ಹೋಗುವನೆಂದೂ ಅಲ್ಲಿಯ ಅವನ ಭೋಗಕ್ಕೆ ಇಲ್ಲಿಂದ ವಸ್ತುಗಳನ್ನು ಕಳುಹಿಸಬೇಕೆಂದು ಭಾವಿಸಿದ್ದರು. ಬಹುಶಃ ಸಹಗಮನ ಪದ್ಧತಿಗೆ ಇದೇ ಮೂಲವಿರಬಹುದೆಂದು. ಅಥವಾ ತಾನು ಸತ್ತಮೇಲೆ ತನ್ನ ಪ್ರೇಯಸಿಯು ಇನ್ನೊಬ್ಬರ ವಶವಾಗುವ ಸಾಧ್ಯತೆಯನ್ನು ಕಲ್ಪಿಸಿಕೊಂಡ ಪುರುಷನ ಅಸೂಯೆಯೂ ಕಾರಣವಿರಬಹುದು.ಪತಿಯ ಜೊತೆಯಲ್ಲಿ ಅವನ ವಿಧವೆಯನ್ನೂ ಸುಡುವ ಪದ್ಧತಿಯು ಪ್ರಾಚೀನ ಭಾರತದಲ್ಲಿ ಮಾತ್ರವಲ್ಲ,ಪ್ರಾಚೀನ ಗ್ರೀಕ್,ಜರ್ಮನಿ, ಮುಂತಾದ ಯುರೋಪ್ ಮತ್ತು ಪಶ್ಚಿಮ ಏಷ್ಯಾ ಜನಾಂಗಗಳಲ್ಲಿಯೂ ಇದ್ದಿತು.ಚೀನಾದಲ್ಲಿ ವಿಧವೆಯರು ಮತ್ತೆ ಮದುವೆಯಾಗುವುದು ಪಾಪವೆಂದು ನಂಬಿದ್ದರು.ಭಾರತದಲ್ಲಿನ ಈ ಪದ್ಧತಿಯು ವೇದಗಳ ಕಾಲದಲ್ಲಿ ರೂಢಿಯಲ್ಲಿರಲಿಲ್ಲ.ಅದು ತದನಂತರ ಜಾರಿಗೆ ಬಂದ ಪದ್ಧತಿಯಾಗಿದೆ.ಬ್ರಾಹ್ಮಣಕಗಳಲ್ಲಿ ಮತ್ತು ಗ್ರಹ್ಯಸೂತ್ರಗಳಲ್ಲಿಯೂ ಸಹಗಮದ ಹೆಸರಿಲ್ಲ. ಮನು ಮತ್ತು ಯಾಜ್ಞವಲ್ಕ್ಯರು ಸಹಗಮನದ ಬಗ್ಗೆ ಒಪ್ಪಿಗೆಯಿರಲಿಲ್ಲ.ಅದರೆ ಗಂಡನ ಸಾವಿನ ನಂತರ ವಿಧವೆಯರು ಕಠಿಣ ಆಚರಣೆಗಳ ಮೂಲಕ ಜೀವನವನ್ನು ಸಾಗಿಸಬೇಕೆಂಬ ನಿಯಮವನ್ನು ಹೇರಿದ್ದರು.ಸತಿ ಅಥವಾ ಸಹಗಮನ ಪದ್ಧತಿಯು ಸಾರ್ವತ್ರಿಕವಾಗಿರಲಿಲ್ಲ ಮತ್ತು ಬಲಾತ್ಕಾರದ ಅಂಶವೂ ಅಲ್ಲಿಲ್ಲವೆಂಬುದು ಗಮನಿಸಬೇಕಾದ ಸಂಗತಿ.ಬಲಾತ್ಕಾರದ ಸಹಗಮನಕ್ಕೆ

ಧರ್ಮಶಾಸ್ತ್ರಗಳಲ್ಲಿಯೂ ಒಪ್ಪಿಗೆಯಿರಲಿಲ್ಲ.ಆದರೂ ಕೆಲವು ಕಡೆ ಅದಕ್ಕೆ ಧಾರ್ಮಿಕ ವಿಧಿಯ ಸ್ವರೂಪ ಬಂದು ಹೆಣ್ಣಿಗೆ ಇಷ್ಟವಿಲ್ಲದಿದ್ದರೂ ವಿಧಿ ನಡೆಯುತ್ತಿದಂತೆ ತೋರುತ್ತದೆ.

ದಕ್ಷಿಣ ಭಾರತದಲ್ಲಿ ಕ್ರಿ.ಶ. ೧೦ನೇ ಶತಮಾನದವರೆಗೆ ಸಹಗಮನ ಪದ್ಧತಿಯು ಹೆಚ್ಚು ಪ್ರಚಾರಕ್ಕೆ ಬರಲಿಲ್ಲ.ಆದರೆ ಕರ್ನಾಟಕದಲ್ಲಿ ಸಹಗಮನದ ಅತ್ಯಂತ ಪ್ರಾಚೀನ ಉಲ್ಲೇಖವೆಂದರೆ ಬಹುಶಃ ಕ್ರಿ.ಶ.ಸು.೪೦೦ರ ಸೊರಬ ತಾಲೂಕಿನ ಶಾಸನ.ಕದಂಬ ವಂಶದ ರಾಣಿಯೊಬ್ಬಳು ರವಿವರ್ಮನೊಡನೆ–ಈತ ಆಕೆಯ ಗಂಡನಿರಬೇಕು–ಮುಕ್ತಳಾದಂತೆ ಈ ಶಾಸನವು ತಿಳಿಸುತ್ತದೆ.

## ಮಹಾಸತಿಯ ಆಚರಣೆಯ ಕಾರಣಗಳು:

ವಿದ್ವಾಂಸರಾದ ಎಂ.ಎಂ.ಕಲಬುರ್ಗಿಯವರು ಅಭಿಪ್ರಾಯದಂತೆ ಜಗತ್ತಿನಲ್ಲಿ ಬೇರೆ ಭಾಗಗಳಂತೆ ಭಾರತದಲ್ಲಿ, ಹಾಗೆಯೇ ಕರ್ನಾಟಕದಲ್ಲಿ ಈ ಪದ್ಧತಿ ತುಂಬಾ ಪ್ರಾಚೀನವಾದುದು. ಸತ್ತ ವ್ಯಕ್ತಿಯೊಂದಿಗೆ ಅವನ ಪ್ರಿಯವಸ್ತುಗಳನ್ನು ಹೂಳಬೇಕೆಂಬ ಇಲ್ಲವೇ ಸುಡಬೇಕೆಂಬ ಭಾವನೆ ಈ ಸಂಪ್ರದಾಯಕ್ಕೆ ದಾರಿ ಮಾಡಿಕೊಟ್ಟಿರಬಹುದಾದರೂ ಇದರ ಉಗಮಕ್ಕೆ ಮೂರು ವ್ಯಾವಹಾರಿಕ ಕಾರಣಗಳನ್ನು ಊಹಿಸಬಹುದು.

ಒಂದು: ಮರಣದ ತರುವಾಯ ತನ್ನ ಸತಿ ಮನಸಾ ಇಲ್ಲವೇ ಮನಸ್ಸಿಲ್ಲದೆ ಅನ್ಯರಿಗೆ ವಶವಾಗಬಹುದೆಂಬ 'ಪುರುಷನ ಪ್ರತಿಷ್ಠೆ' ಈ ಸಂಪ್ರದಾಯವನ್ನು ಸ್ತ್ರೀಯರಿಗೆ ರೂಪಿಸಿಕೊಟ್ಟಿರಬಹುದು.

ಎರಡು: ಪತಿಯ ಮರಣದ ತರುವಾಯ ತನ್ನ ಬದುಕುವಿಕೆ ಮತ್ತು ಪಾವಿತ್ರ್ಯಗಳ ಅನಿಶ್ಚಿತತೆ ಕಾರಣವಾಗಿ ಸ್ತ್ರೀವರ್ಗವೇ ಇದನ್ನು ರೂಪಿಸಿಕೊಂಡಿರಬಹುದು.

ಮೂರು:ಪತಿಯ ಮರಣದ ತರುವಾಯ ಸತಿಯನ್ನೂ ಮರಣ ಕೂಪಕ್ಕೆತಳ್ಳಿ ಅವಳ ಆಸ್ತಿಯನ್ನು ಸೆಳೆಯಲು 'ಪ್ರಭುವರ್ಗ' ಇಲ್ಲವೇ 'ಪುರೋಹಿತ ವರ್ಗ' ಈ ಯೋಜನೆಯನ್ನು ರೂಪಿಸಿರಬಹುದು.

'ಸತಿ' ಪದ್ಧತಿಗೆ ಬಳಸುವ ಪದ.ಬಹುಶಃ ಶಿವನ ಪತ್ನಿ ದಾಕ್ಷಾಯಿಣಿ ಅಥವಾ ಸತಿದೇವಿ ಪತಿಯ ಪರವಾಗಿ ನಿಂತು, ದಕ್ಷಬ್ರಹ್ಮನ ಯಜ್ಞದಲ್ಲಿ ಪ್ರಾಣಾರ್ಪಣೆ ಮಾಡಿದ ಘಟನೆಯೇ ಗಂಡನಿಗಾಗಿ ಹೆಂಡತಿ ಚಿತಾ ಪ್ರವೇಶ ಮಾಡುವ ಈ 'ಸತಿ' ಪದ್ಧತಿಗೆ ಮೂಲವಾಗಿರಬೇಕು. ಈ ಪದ್ಧತಿಯ ಗೌರವಸೂಚಿ ಪದ 'ಮಹಾಸತಿ', ಇದರ ತದ್ಭವರೂಪ ಮಾಸ್ತಿ.

**ಮಹಾಸತಿ ಆಚರಣೆಯ ವಿಧಗಳು:**

ಮಾಸ್ತಿ, ಎರಡು ಬಗೆಯಾಗಿದೆ: ೧. ಸಹಗಮನ (ಸಹಮರಣ), ೨. ಅನುಗಮನ.ಕರ್ನಾಟಕದಲ್ಲಿ ಸಹಗಮನದ ಸ್ಪಷ್ಟ ಐತಿಹಾಸಿಕ ನಿದರ್ಶನವು ಕ್ರಿ.ಶ.೬೭೨ರ ಶಾಸನವೊಂದರಲ್ಲಿ ದೊರಕುತ್ತದೆ.ಬಿಯಣ್ಣ ಎನ್ನುವವನು ಮಡಿದಾಗ ಅವನ ಹೆಂಡತಿಯಾಗಿದ್ದ ಜಕ್ಕಬ್ಬೆಯೂ ಪ್ರಾಣವನ್ನು ತ್ಯಜಿಸುತ್ತಾಳೆ.ಅವಳ ತಂಗಿ ಜಾಬೆಯು ಕಲ್ಲನ್ನು ನಿಲ್ಲಿಸುತ್ತಾಳೆ.ಬಹುಶಃ ಅದೇ ಸಮಯದಲ್ಲಿ ಪ್ರಸಿದ್ಧಳಾಗಿರುವ ದಾನಚಿಂತಾಮಣಿ ಅತ್ತಿಮಬ್ಬೆಯ ತಂಗಿ ಗುಂಡಮಬ್ಬೆಯು ಸಹಗಮನವನ್ನು ಮಾಡುತ್ತಾಳೆ.ಇದೇ ಪ್ರಸಂಗವನ್ನು ಮಹಾಕವಿ ರನ್ನನು ತನ್ನ ಅಜಿತನಾಥಪುರಾಣದಲ್ಲಿ ವಿಸ್ತರಿಸಿ ಹೇಳಿದ್ದಾನೆ. ಚಾಲುಕ್ಯ ಚಕ್ರವರ್ತಿ ಅಹಮಲ್ಲದೇವನ ಭುಜದಂಡದಂತೆ ಇದ್ದ ನಾಗದೇವನಿಗೆ ಅತ್ತಿಮಬ್ಬೆ ಮತ್ತು ಗುಂಡಮಬ್ಬೆ ಎಂಬ ಸಹೋದರಿಯರು ಪತ್ನಿಯರಾಗಿದ್ದರು.ಅತ್ತಿಮಬ್ಬೆಗೆ ಅಣ್ಣಿಗನೆಂಬ ಕಿರಿಯ ಸಹೋದರನಿದ್ದನು.ಹೀಗಿರುವಾಗ ನಾಗದೇವನು ಸ್ವರ್ಗವಾಸಿಯಾಗುತ್ತಾನೆ. ಗಂಡನ ಪರೋಕ್ಷದಲ್ಲಿ ಸತಿಯ ಕರ್ತವ್ಯವೇನೆಂಬುದನ್ನು ರನ್ನನು ಗುಂಡಮಬ್ಬೆಯ ಬಾಯಲ್ಲಿ ಹೇಳಿಸುತ್ತಾನೆ. ಕುಲವಧುವಾದವಳು ಪತಿಯ ಪರೋಕ್ಷದಲ್ಲಿ ಮಾಡಬೇಕಾದ ಕರ್ತವ್ಯ, ಜಿನದೀಕ್ಷಾಚರಣಂ;ಅಥವಾ 'ಶುಭಚರಿತದೆ ಮರಣಂ'. ಗಂಡನ ಸಾವಿನ ನಂತರ ಭೋಗಜೀವನವನ್ನು ನಡೆಯಿಸುವುದು ಪಾಪಕರ.ಹೀಗೆ ಹೇಳಿದ ಗುಂಡಮಬ್ಬೆಯು,ಅಕ್ಕ ಅತ್ತಿಮಬ್ಬೆಗೆ ಒಬ್ಬ ಮಗನಿರುವುದರಿಂದ ಅವನನ್ನು ಬೆಳೆಸುವುದು ಅವಳ ಕರ್ತವ್ಯವೆಂದು ಹೇಳಿ, ತನ್ನ ಗಂಡನನ್ನು ಅಪ್ಪಿಕೊಂಡು ಚಿತಾಗ್ನಿಯಲ್ಲಿ ಮಡಿಯುತ್ತಾಳೆ.ಅವಳನ್ನು ಇಡೀ ಲೋಕವೇ ಹೊಗಳಿತು.

ಅನುಗಮನ: ಪತಿಯು ಎಲ್ಲೋ ದೂರದ ಪ್ರದೇಶದಲ್ಲಿ ಮಡಿದದ್ದನ್ನು ಕೇಳಿ ಅವನ ಸ್ಮಾರಕವಾಗಿ ಅವನಿಗೆ ಸೇರಿದ ಯಾವುದಾದರೂ ಒಂದು ವಸ್ತುವನ್ನು ಹಿಡಿದುಕೊಂಡು ಪ್ರಾಣವನ್ನು ಬಿಡುವುದು ಅನುಗಮನ ಅಥವಾ ಅನುಮರಣ. ಅನುಮರಣಕ್ಕೆ ಅತ್ಯುತ್ತಮ ನಿದರ್ಶನ ಹೆಗ್ಗಡೆದೇವನಕೋಟೆಯ ತಾಲೂಕಿನ ಬೆಳತೂರು ಶಾಸನದಲ್ಲಿ ದೊರಕುತ್ತದೆ.ನುಗುನಾಡ ಅಧಿಪತಿ ರವಿಗ ಮತ್ತು ಪೊನ್ನಕಬ್ಬೆಯರ ಮಗಳು ದೇಕಬ್ಬೆ-ಇವಳನ್ನು ನವಿಲೆನಾಡು ಈಚನಿಗೆ ಕೊಡುತ್ತಾರೆ. ಇವನು ಒಮ್ಮೆ ದಾಯಿಗರೊಡನೆ ಹೋರಾಡುತ್ತಿರುವಾಗ ಅವನನ್ನು ಬಂಧಿಸಿ ತಲಕಾಡಿಗೆ ಕೊಂಡೊಯ್ದು ಕೊಲ್ಲುತ್ತಾರೆ.ಅದನ್ನು ಕೇಳಿದ ದೇಕಬ್ಬೆಯು ಅಗ್ನಿ ಪ್ರವೇಶ ಮಾಡಲು ನಿರ್ಧರಿಸುತ್ತಾಳೆ. ಅವಳ ತಂದೆ-ತಾಯಿಗಳು,ಬಂಧುಬಳಗ ಎಲ್ಲರೂ ಸೇರಿ ಸಾಯಬೇಡವೆಂದು ಕಾಲುಹಿಡಿದು ಬೇಡಿಕೊಳ್ಳುತ್ತಾರೆ, ಸಹಗಮನವನ್ನು ಮಾಡಿಕೊಳ್ಳಬೇಡ ಎಂದರೂ ಅವರೆಲ್ಲರ ಮಾತುಗಳನ್ನು ನಿರ್ಲಕ್ಷಿಸಿ,ಬೇಡಿದವರಿಗೆಲ್ಲ ಹೊನ್ನು,ವಸ್ತ್ರ,ಹಸು ಹಣಗಳನ್ನು ನೀಡಿ ಅಗ್ನಿಯನ್ನು ಪ್ರವೇಶಿಸುತ್ತಾಳೆ.ಕನ್ನಡದಲ್ಲಿ ಇಷ್ಟು ವಿಸ್ತಾರವಾಗಿ ಸಹಗಮನವನ್ನು ವರ್ಣಿಸಿರುವ ಶಾಸನ ಮತ್ತೊಂದಿಲ್ಲ.

**ಮಾಸ್ತಿ ಶಿಲ್ಪ:**

ಸಹಗಮನವನ್ನು ಮಾಡಿ ಮಹಾಸತಿಯಾದವರ ಸ್ಮಾರಕವಾಗಿ ನಿಲ್ಲಿಸಿದ ಕಲ್ಲುಗಳೇ ಮಾಸ್ತಿಗಲ್ಲುಗಳು.ಸಾಮಾನ್ಯವಾಗಿ ಮಾಸ್ತಿಗಲ್ಲುಗಳ ಮೇಲೆ ಸ್ತ್ರೀಯ ಚಿತ್ರವಿರುತ್ತದೆ.ಶಾಸನಗಳಿದ್ದರೂ ಅವು ವಿರಳವೆನ್ನಬಹುದು.ಸ್ತ್ರೀಯ ತಲೆಯ ಹಿಂದೆ ಹೂವಿನ ದಂಡೆಯನ್ನು ಕೊರೆಯುವುದುಂಟು.ಕೆಲವೊಮ್ಮೆ ಇಂತಹ ಕಲ್ಲುಗಳ ಮೇಲೆ ಕಂಬದಿಂದ ಹೊರಟ ತೋಳಿನ ಚಿತ್ರಮಾತ್ರವಿರುತ್ತದೆ.ಸತಿಯರು ಚಿತೆಯನ್ನೇರಲು ಹೋಗುವಾಗ ಕುಂಕುಮದಲ್ಲಿ ಅದ್ದಿ  ಬಾಗಿಲಿನ ಮೇಲೆ ತಮ್ಮ ಬೆರಳುಗಳನ್ನು ಮೂಡಿಸುತ್ತಿದ್ದರು.ಆ ಬೆರಳುಗಳನ್ನು ಅದಕ್ಕೆ ಸೇರಿದಂತೆ ತೋಳನ್ನು ಶಿಲ್ಪಿಗಳು ಕೊರೆಯುತ್ತಿದ್ದರು. ಮಾಸ್ತಿಶಿಲ್ಪದಲ್ಲಿ ಎತ್ತಿದ ಬಲಗೈ ಇರಲೇಬೇಕು.ಮುಂಗೈಯಲ್ಲಿ ಬಳೆ, ಅಂಗೈಯಲ್ಲೆ ಸಾಮಾನ್ಯವಾಗಿ ಲಿಂಬೆಹಣ್ಣು, ವಿರಳವಾಗಿ ಪದ್ಮ ಇರುತ್ತವೆ. ಸತಿಹೋಗುವ ಪೂರ್ವದಲ್ಲಿ ಅವಳ ಬಲಗೈಯನ್ನು ಕುಂಕುಮ ದ್ರವದಲ್ಲಿ ಅದ್ದಿಸಿ ಕಲ್ಲ ಮೇಲೆ ಮುದ್ರಿಸಿಕೊಂಡು ಆಮೇಲೆ ಶಿಲ್ಪ ಬಿಡಿಸುತ್ತಿದ್ದರೆಂದು ಕೆಲವರು ಹೇಳುವುದು ಕೇವಲ ಊಹೆಯೇ ಸರಿ.ಎತ್ತಿದ ಕೈಗೆ,ಹಿಡಿದ ಲಿಂಬೆಹಣ್ಣಿಗೆ ವಿದ್ವಾಂಸರು ಬೇರೆ ಬೇರೆ ಅರ್ಥ ಹೇಳುವುದುಂಟು.ಅವಳ ಅಂಗೈಯಲ್ಲಿದ್ದುದು ಲಿಂಬೆ ಹಣ್ಣಲ್ಲ.ಅದು ಮಾದಲ ಹಣ್ಣೆಂದು ಕೆಲ ವಿದ್ಯಾಂಸರ ಅಭಿಪ್ರಾಯವಾಗಿದೆ.ಇಕ್ಕೇರಿಯಲ್ಲಿ ಸತಿಹೋದ ಮಹಿಳೆಯೊಬ್ಬಳು ಒಂದು ಕೈಯಲ್ಲಿ ಲಿಂಬೆ, ಇನ್ನೊಂದು ಕೈಯಲ್ಲಿ ಕನ್ನಡಿ ಹಿಡಿದಿದ್ದಳೆಂದು ಪಿಯೆಟ್ರೆಡ’ಲೆವಲ್ಲೆ ಹೇಳುವುದರಿಂದ ಕೆಲವರು ಭಾವಿಸಿರುವಂತೆ ಅವಳ ಕೈಯಲ್ಲಿದ್ದದ್ದು ಮಾದಲ ಹಣ್ಣಲ್ಲ, ಲಿಂಬೆಹಣ್ಣು.

**ಸ್ವರೂಪದೃಷ್ಟಿಯಿಂದ ಮಾಸ್ತಿಶಿಲ್ಪಗಳು:** ಸಾಮಾನ್ಯವಾಗಿ ನಾಲ್ಕು ಬಗೆಯಲ್ಲಿ ಕಂಡುಬರುತ್ತವೆ. **ಅ**.ಎತ್ತಿದ ಬಲದೋಳು ಶಿಲ್ಪ, **ಆ**. ಎತ್ತಿದ ಬಲದೋಳಿನ ಸ್ತ್ರೀಶಿಲ್ಪ, **ಇ.** ಪತಿಯೊಂದಿಗೆ ನಿಂತು ಎತ್ತಿದ ಬಲದೋಳಿನ ಸ್ತ್ರೀಶಿಲ್ಪ, **ಈ**. ಇತರ ಸ್ವರೂಪದ ಶಿಲ್ಪ–ಎಂದು ೪ ಬಗೆಯಲ್ಲಿ ತೋರಿಬರುತ್ತದೆ.

ಅ. ಸಾಮಾನ್ಯವಾಗಿ ಎಲ್ಲ ಕಡೆಗೂ ತೋರಿಬರುವುವು, ಎತ್ತಿದ ಬಲದೋಳಿನ ಶಿಲ್ಪಗಳು. ಇವು ಕೆಲವೊಮ್ಮ ಕಂಬದಿಂದ ಹೊರಟಿರುವಂತೆ ಚಿತ್ರಿತವಾಗಿರುತ್ತವೆ. ಹಳ್ಳಿಗಳಲ್ಲಿ ಭ್ರಾಂತಿಯಿಂದ ಇವುಗಳನ್ನು ವ್ಯಾಸನ ತೋಳುಗಳೆಂದು ಕರೆಯುತ್ತಾರೆ.

**ಆ.** ಎತ್ತಿದ ಬಲದೋಳುಳ್ಳ ಸ್ತ್ರೀಶಿಲ್ಪಗಳು ಹಲವಾರು ಕಡೆಗಳಲ್ಲಿ ಸಿಗುತ್ತವೆ. ಕೆಲವೊಮ್ಮೆ ಈ ವಿಗ್ರಹದ ಮಗ್ಗುಲಿಗೆ ಇಲ್ಲವೆ ಮೇಲಿನ ಮೂಲೆಯಲ್ಲಿ ಅಪ್ರಧಾನವಾಗಿ ಪತಿವಿಗ್ರಹವಿರುವುದೂ ಉಂಟು. ಇಳಿಬಿಟ್ಟ ಎಡಗೈ ತೆರವಾಗಿರಬಹುದು ಇಲ್ಲವೆ ಕನ್ನಡಿಯನ್ನು ಹಿಡಿದಿರಬಹುದು. ಕ್ವಚಿತ್ತಾಗಿ ತಲೆಯ ಹಿಂದೆ ಸೂರ್ಯಕಿರಣರೂಪದ ರೇಖೆಗಳಿರುತ್ತವೆ. ಇವು ಜ್ವಾಲೆಗಳೆಂದು ಹೇಳುವವರಾದರೂ ಬಹುಶಃ ಕೇದಗೆಯ ಗರಿಗಳಿರಬಹುದು

**ಇ.** ಪತಿಯೊಂದಿಗಿನ ಸ್ತ್ರೀವಿಗ್ರಹಗಳೂ ಅಲ್ಲಲ್ಲಿ ಸಿಗುತ್ತವೆ. ಇಲ್ಲಿ ಪತಿಯ ಎಡಗಡೆ ನಿಂತು ಸತಿ ಬಲಗೈ ಎತ್ತಿರುತ್ತಾಳೆ. ದಂಪತಿಗಳು ಪರಸ್ಪರ ಹೆಗಲಮೇಲೆ ಕೈಹಾಕಿರುವ ಚಿತ್ರಣಗಳೂ ಕಾಣಸಿಗುತ್ತವೆ. ಅವಳ ಬಲಗೈ ಗಂಡನ ಹೆಗಲ ಮೇಲಿರುವ ಕಾರಣ ಎತ್ತಿದ ಬಲಗೈಯೊಂದನ್ನು ಪ್ರತ್ಯೇಕ ಬಿಡಿಸಿರುತ್ತಾರೆ. ಪತಿಯ ಚಿತ್ರ ಆಯುಧವನ್ನು ಹಿಡಿದಿದ್ದರೆ ಅದು ವೀರಮರಣವನ್ನು ಸಂಕೇತಿಸುತ್ತದೆ.

**ಈ.** ಇತರ ಸ್ವರೂಪದ ಚಿತ್ರಗಳಲ್ಲಿ ಒಂದು ಕಂಬದಿಂದ ಎರಡು ಕೈ ಹೊರಟ 'ಇಕೈಮಾಸ್ತಿ', ಸವತಿಯರಿಬ್ಬರು ಸತಿಹೋದುದನ್ನು ಸೂಚಿಸುತ್ತಿರಬಹುದು. ಕೆಲವು ಮಾಸ್ತಿ ಸ್ತ್ರೀವಿಗ್ರಹಗಳು ಎರಡೂ ಕೈ ಎತ್ತಿದುದುಂಟು.

## ಖಾನಾಪುರ ತಾಲೂಕಿನ ಪರಿಸರದಲ್ಲಿ ಕಂಡುಬರುವ ಮಾಸ್ತಿಶಿಲ್ಪಗಳು:

ಬೆಳಗಾವಿ ಜಿಲ್ಲೆಯ ಖಾನಾಪುರ ತಾಲೂಕಿನಲ್ಲಿ ಇಂತಹ ನೂರಾರು ಮಾಸ್ತಿಕಲ್ಲುಗಳು ಸಿಗುತ್ತವೆ.ಅವು ಈ ಪ್ರದೇಶದ ಸಾಂಸ್ಕೃತಿಕ ಚರಿತ್ರೆಯನ್ನು ಕಟ್ಟಿಕೊಡಲು ಸಹಾಯಕವಾಗುತ್ತವೆ. ಇಡೀ ತಾಲೂಕಿನಾದ್ಯಂತ ದೊರಕುವ ಇಂತಹ ಸ್ಮಾರಕ ಶಿಲ್ಪಗಳು ವಿನಾಶದ ಅಂಚಿನಲ್ಲಿವೆ.ಕೆಲವು ಉತ್ತಮ ಸ್ಥಿತಿಯಲ್ಲಿದ್ದರೆ,ಬಹುತೇಕ ತೃಟಿತಗೊಂಡಿವೆ.ಇವುಗಳಲ್ಲಿ ಶಾಸನ ಸಹಿತ ಮಾಸ್ತಿ ಮತ್ತು ವೀರಮಾಸ್ತಿಗಳು ಅತೀ ವಿರಳವೆನ್ನಬುಹುದು. ಬಹುತೇಕ ಶಿಲ್ಪಗಳು ಶಾಸನರಹಿತವಾಗಿವೆ. ಅವುಗಳ ಮೇಲಿನ ಚಿತ್ರದೃಶ್ಯ ನೋಡಿ ಅವುಗಳ ಕುರಿತು ಇತಿಹಾಸವನ್ನು ರಚಿಸುವ ಜವಾಬ್ದಾರಿ ನಮ್ಮೆಲ್ಲರದಾಗಿದೆ.ಇಂತಹ ಕೆಲವು ಮಾಸ್ತಿಗಲ್ಲುಗಳ ವಿವರಣೆ ಈ ಕೆಳಗಿನಂತಿವೆ.

ಖಾನಾಪುರ ತಾಲೂಕಿನ ಗೋಲಿಹಳ್ಳಿ ಗ್ರಾಮದ ಹೊರವಯಲದಲ್ಲಿರುವ ರಸ್ತೆಯ ಪಕ್ಕ ಹಲವಾರು ಸ್ಮಾರಕ ಶಿಲ್ಪಗಳ ಗುಂಪೇ ಇದೆ.ಅವುಗಳಲ್ಲಿ ಬಹು ಆಕರ್ಷಕವಾದ ಒಂದು ವೀರಮಾಸ್ತಿ ಸ್ಮಾರಕಶಿಲ್ಪವಿದೆ.ಕಪ್ಪು ಮೆದು ಬಳಪದ ಕಲ್ಲಿನಲ್ಲಿ ಕೆತ್ತಿರುವ ಇದು ಮೂರು ಹಂತಗಳಲ್ಲಿ ಕೆತ್ತಲಾಗಿದೆ.ಕೆಳಗಿನ ಹಂತದಲ್ಲಿ ಸತಿಪತಿಗಳಬ್ಬರು ನಿಂತಿರುವ ಚಿತ್ರಣವಿದೆ. ಪುರುಷನು ಬಲಭಾಗದಲ್ಲಿ ನಿಂತಿದ್ದಾನೆ.ತನ್ನ ಬಲಗೈಯಲ್ಲಿ ಕಮಲದ ದಳವನ್ನು ಹಿಡಿದಿದ್ದಾನೆ.ಎಡಗೈ ಬೆರಳುಗಳ ಮಧ್ಯೆ ಲಿಂಬೆಹಣ್ಣನ್ನು ಹಿಡಿದಿದ್ದಾನೆ.ಇದು ಅಪರೂಪ ಚಿತ್ರಣವೆನ್ನಬಹುದು ಏಕೆಂದರೆ ಸಾಮಾನ್ಯವಾಗಿ ಸ್ತ್ರೀಯರ ಕೈಯಲ್ಲಿ ಮಾತ್ರ ಲಿಂಬೆಹಣ್ಣು ಇರುವುದು.ಆದರೆ ಇದು ವಿಶೇಷವೆನ್ನಬಹುದಾದ ಶಿಲ್ಪವಾಗಿದೆ.ಸುಂದರವಾಗಿ ಕೇಶವಿನ್ಯಾಸ ಹೊಂದಿದ್ದು,ಕೂದಲನ್ನು ಬಲಕ್ಕೆ ಗಂಟು ಹಾಕಲಾಗಿದೆ.ಹಣೆಪಟ್ಟಿ ಕೂಡ ಇದ್ದು ಕಿವಿಯೋಲೆಗಳನ್ನು ಧರಿಸಿದ್ದಾನೆ.ಕೊರಳಲ್ಲಿ ಕಂಠೀಹಾರ ಮತ್ತು ಮೊಳಕಾಲದ ಕೆಳಗೆ ಇಳಬಿದ್ದಿರುವ ಉದ್ದನೆಯ ಯಜ್ಞೋಪವೀತ ಧರಿಸಿದ್ದಾನೆ.ಕೈಯಲ್ಲಿ ಕಡಗ ಮತ್ತು ತೋಳ್ಬಂದಿಗಳಿವೆ. ನೆರಿಗೆಯಿರುವ ಧೋತಿ ಮೊಳಕಾಲಿನವರೆಗೆ ಇದ್ದು ಇದರ ಮೇಲೆ ಕಚ್ಚೆಯ ನೆರಿಗೆ ಇದೆ. ಕಚ್ಚೆಯ ಮೇಲೆ ಪಟ್ಟಿಯಾಕಾರದ ಪಸ್ತ್ರವಿದೆ. ಕಾಲಲ್ಲಿ ಪಾದಜಾಲಕ, ಕಾಲ್ಗಡಗ ಮತ್ತು ನೂಪುರಗಳಿವೆ.ದೇಹದ ಮೇಲ್ಭಾಗ ಬೆತ್ತಲೆಯಾಗಿದೆ.ಸಾಮಾನ್ಯವಾಗಿ ವೀರನ ಕೈಯಲ್ಲಿ

ಶಸ್ತ್ರಾಸ್ತ್ರಗಳಿರುತ್ತವೆ. ಆದರೆ ಈ ಶಿಲ್ಪದಲ್ಲಿ ಅಂತಹ ಯಾವುದೇ ಕುರುಹುಗಳಿಲ್ಲ. ಅಂದರೆ ಇಲ್ಲಿ ವೀರ ಯುದ್ಧದ ಹೊರತಾಗಿ ಬೇರೆ ಯಾವುದೋ ಕಾರಣಕ್ಕೆ ಪ್ರಾಣತ್ಯಾಗ ಮಾಡಿಕೊಂಡಿರಬಹುದು.ಇವರ ಎಡಕ್ಕೆ ನಿಂತಿರುವ ಸ್ತ್ರೀ ಶಿಲ್ಪವಿದೆ.ಅಲಂಕರಿಸಿದ ಕೇಶವಿನ್ಯಾಸ ಮತ್ತು ಅದರ ಹಿಂದೆ ಕೇದಿಗೆಯ ಪ್ರಭಾವಳಿಯಿದೆ.ಕೊರಳಲ್ಲಿ ಕಂಠೀಹಾರ ಮತ್ತು ಇತರ ಸರಗಳಿವೆ.ಕೈಬಳೆ ಮತ್ತು ತೋಳ್ಬಂದಿಗಳಿದ್ದು ಭುಜದ ಮೇಲೆ ವಿಶೇಷ ಆಭರಣವಿದೆ.ತನ್ನ ಬಲಗೈಯನ್ನು ಮೇಲಕ್ಕೆತ್ತಿ ಹರಸುವಂತೆ ಹಿಡಿದಿದ್ದಾಳೆ.ಎಡಗೈಯನ್ನು ಇಳಿಬಿಟ್ಟಿದ್ದು,ಬೆರಳುಗಳ ಮಧ್ಯೆ ಲಿಂಬೆಹಣ್ಣನ್ನು ಹಿಡಿದಿದ್ದಾಳೆ.ಪಾದದವರೆಗೆ ಉದ್ದವಿರುವ ಲಂಗದಂತಹ ಸುಂದರ ಕಚ್ಚೆಯ ಬಟ್ಟೆಯನ್ನು ಧರಿಸಿದ್ದಾಳೆ.ಹೊಕ್ಕಳಿನ ಮೇಲ್ಭಾಗದಲ್ಲಿ ಯಾವುದೇ ಬಟ್ಟೆಗಳಿರುವುದಿಲ್ಲ.ಕಾಲಿನಲ್ಲಿ ನೂಪುರ ಮತ್ತು ಗೆಜ್ಜೆಗಳಿವೆ.ಈ ಶಿಲ್ಪದ ಎರಡನೇ ಹಂತದಲ್ಲಿ ಸತ್ತ ವೀರ ಮತ್ತು ಅವನ ಪತ್ನಿಯನ್ನು ಮಂಟಪದಲ್ಲಿ ಕುಳ್ಳಿರಿಸಿ ಸ್ವರ್ಗಕ್ಕೆ ಒಯ್ಯುತ್ತಿದ್ದಾರೆ. ಅವರ ಪಕ್ಕದಲ್ಲಿ ನಾಲ್ಕುಜನ ಅಪ್ಸರೆಯರು ಸಂಗೀತವಾದ್ಯ ಡೋಲಕನ್ನು ನುಡಿಸುತ್ತಿದ್ದಾರೆ.ಅವರ ವೇಷಭೂಷಣವೂ ಕೂಡ ಸುಂದರವಾಗಿ ಕೆತ್ತಲ್ಪಟ್ಟಿದೆ.ಮೇಲಿನ ಮೂರನೇ ಹಂತದಲ್ಲಿ ಸ್ವರ್ಗಸ್ಥರಾದ ಸತಿಪತಿಗಳಿಬ್ಬರು ಶಿವಲಿಂಗದ ಮುಂದೆ ಕೈಮುಗಿದು ಕುಳಿತಿದ್ದಾರೆ. ಅವರ ಎದುರಿಗೆ ಯತಿಯೋರ್ವರು ಶಿವಲಿಂಗದ ಪೂಜೆ ಮಾಡುತ್ತಿದ್ದಾರೆ.ಅವರ ಹಿಂದೆ ನಂದಿಯಿದೆ. ಮೇಲ್ಭಾಗದಲ್ಲಿ ಸೂರ್ಯ,ಚಂದ್ರ ಮತ್ತು ಪುಷ್ಪದ ಅಲಂಕಾರವಿದೆ.ಅದರ ಮೇಲೆ ಕಳಶದ ರೀತಿಯ ಕೆತ್ತನೆಯಿದೆ.ಇದರ ಪಕ್ಕದಲ್ಲಿಯೇ ಇನ್ನೊಂದು ವೀರಮಾಸ್ತಿ ಶಿಲ್ಪವಿದೆ. ಇದು ಎರಡು ಹಂತದ ಶಿಲ್ಪಪಟ್ಟಿಕೆಯಾಗಿದೆ. ಕೆಳಗಿನ ಹಂತದಲ್ಲಿ ವೀರ ತನ್ನ ಎಡಗೈಯಲ್ಲಿ ಬಿಲ್ಲನ್ನು ಹಿಡಿದಿದ್ದಾನೆ.ಬಲಗೈಯನ್ನು ಕೆಳಗೆ ಬಿಟ್ಟಿದ್ದು, ಬಾಣವನ್ನು ಹಿಡಿದಿದ್ದಾನೆ.ಬೆನ್ನ ಹಿಂದೆ ಬತ್ತಳಿಕೆಯನ್ನು ಕೆತ್ತಲಾಗಿದೆ. ಕರ್ಣ ಕುಂಡಲ ಮತ್ತು ಕಂಠೀಹಾರಗಳನ್ನು ಧರಿಸಿದ್ದಾನೆ.ಎಡಕ್ಕೆ ತಿರುವುದಂತಿರುವ ಕೂದಲಿನ ಗಂಟಿದೆ.ಸರಳವಾದ ದೋತಿಯಂತಹ ಉಡಿಗೆಯಿದೆ.ಕೈ ಮತ್ತ ಕಾಲುಗಳಲ್ಲಿ ಕಡಗಗಳಿವೆ. ಅವನ ಎಡಕ್ಕೆ ಸ್ತ್ರೀಯ ಶಿಲ್ಪವಿದೆ. ಅದರಲ್ಲಿ ಸ್ತ್ರೀ ತನ್ನ ಬಲಗೈಯನ್ನು ಮೇಲೆಕ್ಕೆತ್ತಿ ಹರಸುವಂತೆ ಚಿತ್ರಿಸಲಾಗಿದೆ.ಕೈಗಳಿಗೆ ಬಳೆ ಮತ್ತು ತೋಳ್ಬಂದಿಗಳಿವೆ.ಹಸ್ತದಲ್ಲಿ ಲಿಂಬೆಹಣ್ಣನ್ನು ಹಿಡಿದಿದ್ದಾಳೆ.ಕೇಶವನ್ನು ಬಲಮುರಿಯಾಗಿ ಗಂಟು ಹಾಕಲಾಗಿದೆ. ಅದರ ಹಿಂದೆ ಕೇದಿಗೆಯ ಪ್ರಭಾವಳಿಯಿದೆ.ಕೊರಳಿನಲ್ಲಿ ಕಂಠೀಹಾರ ಮತ್ತು ಉಪಹಾರಗಳನ್ನು ಕೆತ್ತಲಾಗಿದೆ.ಕೆತ್ತನೆಯಿರುವ ಲಂಗದಂತಹ ಉಡುಗೆ ಮೊಳಕಾಲಿನ ಕೆಳಗಿನವರೆಗಿದೆ. ಇದರ ಮೇಲ್ಭಾಗದ ಪಟ್ಟಿಕೆಯಲ್ಲಿ ಸ್ವರ್ಗಸ್ಥನಾದ ವೀರನನ್ನು ಮಂಟಪದಲ್ಲಿ ಕುಳ್ಳಿರಿಸಿ ಇಬ್ಬರು ಅಪ್ಸರೆಯರು ಸ್ವರ್ಗಕ್ಕೆ ಒಯ್ಯುತ್ತಿದ್ದಾರೆ.ಅದರ ಮೇಲೆ ಶಿವಲಿಂಗವನ್ನು ರಚಿಸ'ಲಾಗಿದೆ. ಅದರ ಪಕ್ಕದಲ್ಲಿ ವೀರ ಪ್ರಾರ್ಥನೆ ಮಾಡುತ್ತಿದ್ದಾನೆ. ಅವನ ಪಕ್ಕದಲ್ಲಿ ಯತಿಯೋರ್ವರು ಪೂಜೆಗೈಯುತ್ತಿದ್ದಾರೆ. ಶಿವಲಿಂಗದ ಎದುರಿಗೆ ನಂದಿಯ ಕೆತ್ತನೆಯಿದೆ.

ಇದೇ ತಾಲೂಕಿನ ಕಾರಲಗಾ ಗ್ರಾಮದ ದೇವಾಲಯವೊಂದರ ಪಕ್ಕದಲ್ಲಿ ಹತ್ತಾರು ಶಿಲ್ಪಗಳಿವೆ ಅವುಗಳಲ್ಲಿ ವಿಶೇಷವಾದ ವೀರಮಾಸ್ತಿಯಿದೆ. ಮೂರು ಹಂತದ ಈ ಶಿಲ್ಪವನ್ನು ಬಳಪದ ಕಲ್ಲಿನಿಂದ ಮಡಲಾಗಿದೆ. ಕೆಳಗಿನ ಹಂತದಲ್ಲಿ ಯುದ್ಧದ ದೃಶ್ಯವಿದೆ. ಇದರಲ್ಲಿ ವೀರ ಶತೃಗಳೊಡನೆ ಹೋರಾಡಿತ್ತಿರುವ ದೃಶ್ಯವಿದೆ. ವೀರ ಮತ್ತು ಶತ್ರುಗಳ ಕೈಯಲ್ಲಿ ಡಾಲು ಮತ್ತು

ಖಡ್ಗಗಳಿವೆ. ವೀರನ ಕಾಲಕೆಳಗೆ ಹೆಣಗಳ ರಾಶಿಯಿದೆ.ಇಲ್ಲಿ ಹೋರಾಡುತ್ತಿರುವ ಎರಡೂ ಕಡೆಯವರು ಆಭರಣಗಳನ್ನು ಧರಿಸಿದ್ದಾರೆ.ಇದರ ಮೇಲಿನ ಹಂತದಲ್ಲಿ ಇಬ್ಬರು ಸ್ತ್ರೀಯರನ್ನು, ವೀರ ಮತ್ತು ಮಾಸ್ತಿ ತೋಳಿನ ಕಂಬವನ್ನು ಕೆತ್ತಲಾಗಿದೆ. ವೀರ ತನ್ನ ಕೈಯಲ್ಲಿ ಡಾಲು ಮತ್ತು ಕತ್ತಿಯನ್ನು ಹಿಡಿದಿದ್ದಾನೆ. ವಸ್ತ್ರಾಭರಣಗಳಿಂದ ಅವನು ಅಲಂಕೃತಗೊಂಡಿದ್ದಾನೆ. ಅವನ ಹಿಂದೆ ಮತ್ತು ಮುಂದೆ ಇಬ್ಬರು ಸ್ತ್ರೀಯರಿದ್ದಾರೆ.ಅವರಿಬ್ಬರೂ ಅಲಂಕೃತಗೊಂಡಿದ್ದಾರೆ. ಒಬ್ಬಳು ತನ್ನ ಎಡಗೈಯಲ್ಲಿ ಕನ್ನಡಿ ಮತ್ತು ಬಲಗೈಯಲ್ಲಿ ಲಿಂಬೆಹಣ್ಣು ಹಿಡಿದಿದ್ದಾಳೆ. ಅವಳ ಹಿಂದೆ ಒಂದು ಮಾಸ್ತಿ ತೋಳಿನ ಕಂಬದ ಶಿಲ್ಪವಿದೆ. ಪುಷ್ಪದ ಕೆತ್ತನೆಯಿರುವ ಕಂಬದಿಂದ ಸ್ತ್ರೀಯ ಬಲಗೈ ಹೊರಚಾಚಿ, ಮೇಲಕ್ಕೆತ್ತಿ ಹರಸುವಂತಿದೆ. ಇದು ವಿಶೇಷವಾದ ಶಿಲ್ಪವಾಗಿದೆ.ಇಂತಹ ಶಿಲ್ಪಗಳು ವಿರಳ ಏಕೆಂದರೆ ಸಾಮಾನ್ಯವಾಗಿ ವೀರ ಮತ್ತು ಸತಿಯರಿಗೆ ಸಮಾನವಾದ ಇಂತಹ ಶಿಲ್ಪ ಕಡಿಮೆ.ಮೇಲಿನ ಹಂತದಲ್ಲಿ ವೀರ ಮತ್ತು ಪತ್ನಿಯರು ಸ್ವರ್ಗದಲ್ಲಿ ಕುಳಿತು ಕೈಮುಗಿದು ಪ್ರಾರ್ಥಿಸುತ್ತಿದ್ದಾರೆ.ಯತಿಯೋರ್ವರು ಶಿವಲಿಂಗಕ್ಕೆ ಪೂಜೆಗೈಯ್ಯುತ್ತಿದ್ದಾರೆ. ಅವರ ಹಿಂದೆ ನಂದಿಯ ಕೆತ್ತನೆಯಿದೆ.

ಗುಂಜಿ ರವಳನಾಥ ದೇವಾಲಯದ ಮುಂದೆ ಹತ್ತಾರು ಸ್ಮಾರಕ ಶಿಲೆಗಳಿವೆ. ಅವುಗಳಲ್ಲಿ ವೀರಮಾಸ್ತಿ ಶಿಲ್ಪಗಳೂ ಇವೆ. ಎರಡು ಹಂತದ ಒಂದು ಶಿಲ್ಪದಲ್ಲಿ ವೀರ ತನ್ನ ಎಡಗೈಯಲ್ಲಿ ಬಿಲ್ಲನ್ನು ಹಿಡಿದಿದ್ದಾನೆ. ಬೆನ್ನಹಿಂದೆ ಬತ್ತಳಿಕೆಯಿದೆ. ಅವನು ತನ್ನ ಬಲಗೈಯಿಂದ ಸೊಂಟದಲ್ಲಿರುವ ಕಿರುಗತ್ತಿಯನ್ನು ಹಿಡಿದಿರುವಂತೆ ಚಿತ್ರಿಸಲಾಗಿದೆ.ಈತ ಸರಳ ಉಡಿಗೆ ಮತ್ತು ಕೇಶಾಲಂಕಾರವನ್ನು ಹೊಂದಿದ್ದಾನೆ.ಈತನ ಎದುರಿಗೆಸ್ತ್ರೀಯ ಚಿತ್ರಣವಿದೆ. ಆಕೆ ತನ್ನ ಬಲಗೈಯನ್ನು ಹರಸುವಂತೆ ಹಿಡಿದಿದ್ದಾಳೆ. ಹಸ್ತದಲ್ಲಿ ಮಾದಲಹಣ್ಣಿದೆ.ಎಡಗೈಯಲ್ಲಿ ಕನ್ನಡಿಯನ್ನು ಹಿಡಿದಿದ್ದಾಳೆ.ಸರಳ ಉಡಿಗೆ ಮತ್ತು ಕೇಶಾಲಂಕಾರವಿದೆ. ಕೈಯಲ್ಲಿ ಬಳೆ ಮತ್ತು ತೋಳ್ಬಂದಿಗಳಿವೆ. ಇದರ ಮೇಲಿನ ಭಾಗದಲ್ಲಿ ವೀರ ತನ್ನ ಸೊಂಟದಲ್ಲಿರುವ ಕಿರುಗತ್ತಿಯನ್ನು ಬಲಗೈಯಿಂದ ಹಿಡಿದು ನಿಂತಿದ್ದಾನೆ.ವೀರನ ಬಲಕ್ಕೆ ಶಿವಲಿಂಗವಿದೆ. ಅಲ್ಲಿ ಯತಿಗಳು ಪೂಜೆಗೈಯುತ್ತಿದ್ದಾರೆ. ಅವನ ಎಡಭಾಗದಲ್ಲಿ ಸತಿಯು ಕೈಮುಗಿದು ಪ್ರಾರ್ಥಿಸುವಂತೆ ನಿಂತಿದ್ದಾಳೆ.ಸಾಮಾನ್ಯವಾಗಿ ಸ್ವರ್ಗಸ್ಥರಾದ ವೀರ ಮತ್ತು ಸತಿಯರು ಕುಳಿತಿರುವ ಚಿತ್ರಣವಿರುತ್ತದೆ.ಆದರೆ ಇಲ್ಲ ಇಬ್ಬರೂ ನಿಂತಿರುವುದು ವಿಶೇಷವೆನ್ನಬಹುದು.

ತಾಲೂಕಿನ ಬೇಕವಾಡ ಗ್ರಾಮದ ಶಿವ ದೇವಾಲಯದ ಪಕ್ಕದಲ್ಲಿ ವೀರಮಾಸ್ತಿ ಶಿಲ್ಪವಿದೆ. ಇದರಲ್ಲಿ ಒಂದೇ ಹಂತದಲ್ಲಿ ಶಿಲ್ಪವನ್ನು ಕೆತ್ತಲಾಗಿದ್ದು,ಸ್ತ್ರೀ–ಪುರುಷರು ಸಮಭಂಗಿಯಲ್ಲಿದ್ದಾರೆ. ವೀರನು ತನ್ನ ಬಲಗೈಯಲ್ಲಿ ಬಿಲ್ಲನ್ನು ಹೆಗಲಿಗೆ ಹಾಕಿ ಹಿಡಿದಿದ್ದಾನೆ. ಬಲಗೈಯಲ್ಲಿ ಸೊಂಟದಲ್ಲಿರುವ ಕಿರುಗತ್ತಿಯನ್ನು ಹಿಡಿದುಕೊಂಡಿದ್ದಾನೆ. ಹಿಂಭಾಗದಲ್ಲಿ ಬತ್ತಳಿಕೆ ಕಾಣುವಂತೆ ಚಿತ್ರಿಸಲಾಗಿದೆ. ಸುಂದರವಾದ ಕೇಶಾಲಂಕಾರವಿದೆ. ಕೇಶವನ್ನು ಎಡಮುರಿಯಾಗಿ ಕಟ್ಟಿಕೊಂಡಿದ್ದಾನೆ. ಕೈಗಳಿಗೆ ತೋಳ್ಬಂದಿ, ಕಡಗಗಳಿವೆ.ಕೊರಳಲ್ಲಿ ಕಂಠೀಹಾರವಿದ್ದು,ಯಜ್ಞೋಪವೀತವನ್ನು ಧರಿಸಿದ್ದಾನೆ. ಅವನ ಎಡಭಾಗದಲ್ಲಿ ಸತಿಯ ಶಿಲ್ಪವಿದೆ. ಆಕೆಯು ತನ್ನ ಬಲಗೈಯನ್ನು ಎತ್ತಿ ಹರಸುವಂತೆ ಹಿಡಿದಿದ್ದು,ಅಂಗೈಯಲ್ಲಿ ಮಾದಲ ಹಣ್ಣಿದೆ. ಎಡಗೈಯನ್ನು ಹಾಗೆಯೇ

ಇಳಿಬಿಟ್ಟಿದ್ದಾಳೆ. ಕೇಶಾಲಂಕಾರವಿದ್ದು ಹಿಂದೆ ಕೇದಿಗೆಯ ಪ್ರಭಾವಳಿಯಿದೆ.ಕರ್ಣಕುಂಡಲ,ಕಂಠೀಹಾರ,ಉರಹಾರಗಳನ್ನು ಮತ್ತು ಬಳೆಗಳನ್ನು ಧರಿಸಿದ್ದಾಳೆ.ನೆರಿಗಿಯಿರುವ ಲಂಗದಂತಹ ಉಡುಗೆಯಿದೆ. ಇದರ ಮೇಲಿನ ಹಂತ ಚಿಕ್ಕದಾಗಿದ್ದು ಸತಿ–ಪತಿಗಳಿಬ್ಬರು ಕೈಮುಗಿದು ಕುಳಿತ್ತಿದ್ದಾರೆ. ಅವರ ಎಡಕ್ಕೆ ಇರುವ ಶಿವಲಿಂಗಕ್ಕೆ ಯತಿಗಳು ಪೂಜೆಗೈಯ್ಯುತ್ತಿದ್ದಾರೆ. ಅವರ ಹಿಂದೆ ನಂದಿಯಿದ್ದು ಮೇಲೆ ಸೂರ್ಯ–ಚಂದ್ರರನ್ನು ಕೆತ್ತಲಾಗಿದೆ. ಅಸೋಗಾದಲ್ಲಿ ಶಿವದೇವಾಲಯದ ಆವರಣದಲ್ಲಿ ಹಲವಾರು ಮಾಸ್ತಿಗಲ್ಲುಗಳು ಮತ್ತು ವೀರಗಲ್ಲುಗಳಿವೆ. ಅವುಗಳಲ್ಲಿ ದೇವಾಲಯದ ಪಕ್ಕದಲ್ಲಿರುವ್ ಆಲದ ಮರದ ಕೆಳಗೆ ಎರಡು ಹಂತದ ಮಾಸ್ತಿಶಿಲ್ಪವೊಂದಿದೆ. ಅದರ ಕೆಳಗಿನ ಭಾಗದಲ್ಲಿ ಸತಿಯ ಶಿಲ್ಪವಿದೆ. ಆಕೆ ತನ್ನ ಎಡಗೈಯನ್ನು ಮೇಲಕ್ಕೆತ್ತಿ ಹರಸುತ್ತಿದ್ದಾಳೆ. ಎಡಗೈಯಲ್ಲಿ ಕನ್ನಡಿಯಿದೆ.ಸರಳ ಕೇಶಾಲಂಕಾರವಿದ್ದು,ಹಿಂದೆ ಕೇದಿಗೆಯ ದಳಗಳ ಪ್ರಭಾವಳಿಯಿದೆ.ಕರ್ಣಕುಂಡಲ,ತೋಳ್ಬಂದಿ ಮತ್ತು ಕೈಬಳೆಗಳಿದ್ದು ಮೂರು ನೆರಿಗೆ ಹೊಂದಿದ ಲಂಗದಂತಹ ಉಡುಗೆ ಪಾದದವರೆಗೆ ಇದೆ.ಸೊಂಟಕ್ಕೆ ವಿಶೇಷವಾದ ಕಟೀಸೂತ್ರವಿದೆ. ಇದರ ಮೇಲಿನ ಪಟ್ಟಿಕೆಯಲ್ಲಿ ಸತಿ–ಪತಿಯರಿಬ್ಬರು ಕೈಮುಗಿದು ಕುಳಿತಿದ್ದು,ಅತ್ಯಂತ ಸರಳವಾಗಿದೆ.

ತಾಲೂಕಿನ ಹುಲಿಕೊತ್ತಲದಲ್ಲಿ ವೀರಮಾಸ್ತಿ ಶಿಲ್ಪ ಆ ಗ್ರಾಮದ ಬಾವಿಯ ಮೆಟ್ಟಿಲಿನ ಪಕ್ಕದಲ್ಲಿದೆ. ಅದು ಎರಡು ಹಂತದಲ್ಲಿದ್ದು ,ಕೆಳಗಿನ ಭಾಗದಲ್ಲಿ ವೀರ ಮತ್ತು ಸತಿಯರ ಸಮಭಂಗಿಯ ಶಿಲ್ಪವಿದೆ.ವೀರನು ತನ್ನ ಎಡಗೈಯಲ್ಲಿ ಬಿಲ್ಲನ್ನು ಹಿಡಿದಿದ್ದಾನೆ.ಎಡಗೈಯಿಂದ ಸೊಂಟದಲ್ಲಿರುವ ಕಿರುಗತ್ತಿಯನ್ನು ಹಿಡಿದಿರುವಂತೆ ಚಿತ್ರಿಸಲಾಗಿದೆ.ಕರ್ಣಕುಂಡಲ,ತೋಳ್ಬಂದಿ ಮತ್ತು ಕಾಲ್ಗಡಗಗಳಿವೆ. ಕೇಶಾಲಂಕಾರ ಸರಳವಾಗಿದ್ದು,ಕೂದಲನ್ನು ಬಲಕ್ಕೆ ಗಂಟುಹಾಕಲಾಗಿದೆ.ಸರಳವಾದ ಉಡುಗೆಯಿದೆ.ಅವನ ಎಡಭಾಗದಲ್ಲಿ ಸತಿಯು ತನ್ನ ಬಲಗೈಯನ್ನು ಮೇಲಕ್ಕೆತ್ತಿ ಹರಸುವಂತೆ ಕೆತ್ತಲಾಗಿದೆ.ಎಡಗೈಯಲ್ಲಿ ಕನ್ನಡಿಯನ್ನು ಹಿಡಿದಿದ್ದಾಳೆ.ಕೈಬಳೆ, ತೋಳ್ಬಂದಿ, ತಂಠೀಹಾರ, ಉರಹಾರ ಮತ್ತು ಕರ್ಣಕುಂಡಲಗಳನ್ನು ಧರಿಸಿದ್ದಾಳೆ.ಕೇಶಾಲಂಕಾರ ಸರಳವಾಗಿದ್ದು, ಹಿಂದೆ ಕೇದಿಗೆಯ ಪ್ರಭಾವಳಿಯಿದೆ.ಕಠೀಸೂತ್ರ ಧರಿಸಿರುವ ಆಕೆ ಲಂಗದಂತಹ ನೆರಿಗೆಯೆ ವಸ್ತ್ರವೊಂದನ್ನು ಧರಿಸಿದ್ದಾಳೆ.ಮೇಲಿನ ಭಾಗದಲ್ಲಿ ಸತಿ ಪತಿಯರು ಸ್ವರ್ಗದಲ್ಲಿ ಕೈಮುಗಿದು ಕುಳಿತಿರುವಂತೆ ಚಿತ್ರಿಸಲಾಗಿದೆ.ಅವರ ಪಕ್ಕ ಶಿವಲಿಂಗವಿದ್ದು, ಅದನ್ನು ಯತಿಗಳು ಪೂಜಿಸುತ್ತಿದ್ದಾರೆ.

ಇದೇ ತಾಲೂಕಿನ ನಂದಗಡದಲ್ಲಿಯೂ ಇದೇ ಮಾದರಿಯ ವೀರಮಾಸ್ತಿಯಿದೆ.ಇದು ಮೂರು ಹಂತದ ಚಿತ್ರಪಟ್ಟಿಕೆಯಾಗಿದೆ.ಕೆಳಗಿನ ಹಂತದಲ್ಲಿ ಯುದ್ಧ ಮಾಡುವ ಚಿತ್ರಣವಿದೆ. ಇದರಲ್ಲಿ ವೀರ ಶತ್ರುಗಳೊಡನೆ ಹೋರಾಡುತ್ತಿದ್ದಾನೆ.ಅವನ ಕೈಯಲ್ಲಿ ಖಡ್ಗ ಮತ್ತು ಡಾಲುಗಳಿವೆ.ಬಲಮುರಿಯಾಗಿ ಕೇಶವನ್ನು ಕಟ್ಟಿಕೊಂಡಿದ್ದಾನೆ. ಧೋತಿಯಂತಹ ಕಚ್ಚೆ ಹಾಕಿದ ಉಡುಗೆಯಿದೆ. ಶತ್ರುಗಳೂ ಕೂಡ ಬಿಲ್ಲು ಬಾಣಗಳಿಂದ ದಾಳಿಮಾಡುತ್ತಿದ್ದಾರೆ. ಎರಡನೆಯ ಹಂತದಲ್ಲಿ ವೀರ ಮತ್ತು ಸತಿ ನಿಂತಿರುವ ದೃಶ್ಯಗಳಿವೆ. ವೀರ ತನ್ನ ಕೈಯಲ್ಲಿ ಕಿರುಗತ್ತಿಯನ್ನು ಹಿಡಿದುಕೊಂಡಿದ್ದಾನೆ.ಅವನ ಎದುರಿಗೆ ಸತಿಯು ತನ್ನ ಬಲಗೈಯನ್ನು ಮೇಲಕ್ಕೆತ್ತಿ ಹರಸುವಂತೆ ಹಿಡಿದಿದ್ದಾಳೆ.ಹಸ್ತದಲ್ಲಿ ಲಿಂಬೆಹಣ್ಣು ಇದೆ. ಕೈಗಳಲ್ಲಿಬಳೆ

ಮತ್ತು ತೋಳ್ಬಂದಿಗಳಿವೆ.ಕೇಶವನ್ನು ಸಿಂಗರಿಸಲಾಗಿದೆ. ಕೆಳಗೆ ಲಂಗದಂತಹ ನೆರಿಗೆ ಇರುವ ದೃಶ್ಯವಿದೆ. ಮೇಲಿನ ಕೊನೆಯ ಹಂತದ ಪಟ್ಟಿಕೆಯಲ್ಲಿ ವೀರ,ಶಿವಲಿಂಗ ನಂದಿಯ ಚಿತ್ರಣವಿದೆ. ತಾಲೂಕಿನ ನೆರಸೇ ಗ್ರಾಮದಲ್ಲಿ ಸುಮಾರು ಇಪ್ಪತ್ತಕೂ ಹೆಚ್ಚು ವೀರಗಲ್ಲು ಮತ್ತು ಮಾಸ್ತಿಗಲ್ಲುಗಳಿವೆ.ಗ್ರಾಮದ ಹೊರವಲಯದ ರವಳಣಾಥ ದೇವಾಲಯದ ಸುತ್ತಮುತ್ತಲಿನ ಪ್ರದೇಶದ ಬಯಲಿನಲ್ಲಿ ಚದುರಿವೆ.ಅವುಗಳಲ್ಲಿ ವೀರಮಾಸ್ತಿ ಶಿಲ್ಪಗಳೂ ಇವೆ. ಅದರಲ್ಲಿ ಒಂದು ಶಿಲ್ಪದಲ್ಲಿ ಒಂಟಿಕೈ ಮಾಸ್ತಿಶಿಲ್ಪವಿದೆ.ಒಂದು ಕಂಬದಿಂದ ಕೈ ಹೊರಚಾಚಿದಂತೆ ಕೆತ್ತಲಾಗಿದೆ.ಕೈಗಳಿಗೆ ಬಳೆಗಳಿವೆ.ಕಂಬದ ಮೇಲಿನ ಭಾಗದಲ್ಲಿ ಕಳಶದ ಮಾದರಿಯನ್ನು ಕೆತ್ತಲಾಗಿದೆ. ಕಂಬದ ಕೆಳಭಾಗದಲ್ಲಿ ವೀರ ಮತ್ತು ಸತಿಯರು ಕೈಮುಗಿದು ಕುಳಿತಿರುವ ಚಿತ್ರಪಟ್ಟಿಕೆಯಿದೆ.ಇಂತಹ ಸುಮಾರು ಐದಾರು ವೀರಮಾಸ್ತಿ ಶಿಲ್ಪಗಳಿದ್ದು ಅವು ಈ ಗ್ರಾಮದ ಪ್ರಾಚೀನ ಕಾಲದ ಸಾಮಾಜಿಕ ಜೀವನದ ಚಿತ್ರಣವನ್ನು ನೀಡುತ್ತವೆ.

ಹಲಸಿಯಲ್ಲಿ ಇಂತಹ ಒಂದು ವೀರಮಾಸ್ತಿ ಶಿಲ್ಪವಿದ್ದು. ಇದರಲ್ಲಿ ವೀರ ಮತ್ತು ಸತಿಯರು ನಿಂತಿರುವಂತೆ ಚಿತ್ರಿಸಲಾಗಿದೆ. ವೀರ ತನ್ನ ಬಲಗೈಯಲ್ಲಿ ಖಡ್ಗವನ್ನು ಹಿಡಿದುಕೊಂಡಿದ್ದಾನೆ. ತನ್ನ ಎಡಗೈಯನ್ನು ಆಕೆಯ ಹೆಗಲ ಮೇಲೆ ಹಾಕಿರುವುದು ಈ ಶಿಲ್ಪದ ವಿಶೇಷವೆನ್ನಬಹುದು. ಸರಳ ಕೇಶರಾಶಿಯಿದ್ದು,ಕರ್ಣಕುಂಡಲಗಳನ್ನು ಧರಿಸಿದ್ದಾನೆ. ಕಂಠೀಹಾರ ಮತ್ತು ಉರಹಾರಗಳನ್ನು ಧರಿಸಿದ್ದಾನೆ.ತೋಳ್ಬಂದಿ, ಕೈಗಡಗ, ಕಾಲ್ಗಡಗ ಮತ್ತು ನೂಪುರಗಳನ್ನು ಧರಿಸಿದ್ದಾನೆ. ಕಚ್ಚೆಯಿರುವ ಕಿರಿದಾದ ಉಡುಗೆಯನ್ನು ಉಟ್ಟಿದ್ದಾನೆ. ಸೊಂಟದಲ್ಲಿ ಕಿರುಗತ್ತಿಯಿದೆ.ಅವನ ಎದುರಿಗೆ ಸತಿಯ ಶಿಲ್ಪವಿದೆ.ಆಕೆ ತನ್ನ ಬಲಗೈಯನ್ನು ಮೇಲಕ್ಕೆತ್ತಿ ಹಿಡಿದು ಹರಸುವಂತೆ ಎತ್ತಿಹಿಡಿದಿದ್ದಾಳೆ.ಅಂಗೈಯಲ್ಲಿ ಲಿಂಬೆಹಣ್ಣಿದೆ.ಕೈಗಳಿಗೆ ಬಳೆ ಮತ್ತು ತೋಳ್ಬಂದಿಗಳಿವೆ. ಆಕೆ ತನ್ನ ಎಡಗೈಯನ್ನು ಇಳಿಬಿಟ್ಟಿದ್ದು,ಕನ್ನಡಿಯನ್ನು ಹಿಡಿದಿದ್ದಾಳೆ.ಕೊರಳಲ್ಲಿ ಕಂಠೀಹಾರ ಮತ್ತು ಉರಹಾರಗಳನ್ನು ಧರಿಸಿದ್ದಾಳೆ. ಸರಳವಾದ ಕೇಶಾಲಂಕಾರವಿದ್ದು, ಕೇದಿಗೆಯ ಪ್ರಭಾವಳಿಯಿದೆ.ಪಾದದವರೆಗೆ ಇರುವ ನೀಳವಾದ ಸರಳ ಉಡುಗೆಯನ್ನು ಧರಿಸಿದ್ದಾಳೆ.

ಬೀಡಿಯಲ್ಲಿ ಇಂತಹುದೇ ವೀರಮಾಸ್ತಿ ಶಿಲ್ಪವಿದೆ. ಇದು ಎರಡು ಹಂತದ ಶಿಲ್ಪವಾಗಿದೆ, ಕೆಳಗಿನ ಹಂತದಲ್ಲಿ ವೀರ ಮತ್ತುಸತಿಯರ ಶಿಲ್ಪಗಳಿವೆ. ವೀರನು ತನ್ನ ಬಲಗೈಯಲ್ಲಿ ಕಮಲದ ಮೊಗ್ಗನ್ನು ಹಿಡಿದಿದ್ದು, ಎಡಗೈಯಲ್ಲಿ ಖಡ್ಗವಿದೆ. ತಲೆಯಲ್ಲಿ ರುಮಾಲಿನಂತ ಅಲಂಕಾರವಿದ್ದುದು ಈ ಶಿಲ್ಪದ ವಿಶೇಷವೆನ್ನಬಹುದು.ಕರ್ಣಕುಂಡಲ, ಕಂಠೀಹಾರ, ಉರಹಾರ,ಕೈಗಡಗ,ಯಜ್ಞೋಪವೀತ,ತೋಳ್ಬಂದಿಗಳನ್ನು ಧರಿಸಿದ್ದಾನೆ. ಅವನ ಪಕ್ಕದಲ್ಲಿನ ಸ್ತ್ರೀಯು ತನ್ನ ಬಲಗೈಯನ್ನು ಮೇಲಕ್ಕೆತ್ತಿರುವಂತೆ ಹಿಡಿದಿದ್ದಾಳೆ.ಎಡಗೈಯಲ್ಲಿ ಕನ್ನಡಿಯನ್ನು ಹಿಡಿದಿದ್ದಾಳೆ.ಕೈಗಳಲ್ಲಿ ಬಳೆ ಮತ್ತು ತೋಳ್ಬಂದಿಗಳಿವೆ. ಕೇಶವನ್ನು ಅಲಂಕರಿಸಿಕೊಂಡಿದ್ದು, ಹಿಂದೆ ಕೇದಿಗೆಯ ರಚನೆಯಿದೆ.ಕೊರಳಲ್ಲಿ ಕಂಠೀಹಾರ, ಮಣಿಸರ ಮತ್ತು ಉರಹಾರಗಳನ್ನು ಧರಿಸಿದ್ದಾಳೆ. ಕೆಳಗೆ ಲಂಗದಂತಹ ಸರಳ ನೆರಿಗೆಯ ಉಡುಗೆ ಇದೆ. ಮೇಲಿನ ಭಾಗದಲ್ಲಿ ಸತಿ ಪತಿಯರು ಸ್ವರ್ಗದಲ್ಲಿ ಕೈಮುಗಿದು ಕುಳಿತಿರುವಂತೆ ಚಿತ್ರಿಸಲಾಗಿದೆ.ಅವರ ಪಕ್ಕ ಶಿವಲಿಂಗವಿದ್ದು, ಅದನ್ನು ಯತಿಗಳು ಪೂಜಿಸುತ್ತಿದ್ದಾರೆ.

**ಉಪಸಂಹಾರ:**

ಹೀಗೆ ಪ್ರಾಚೀನ ಕಾಲದಲ್ಲಿ ಸತಿ ಆಚರಣೆ ರೂಢಿಯಲ್ಲಿದ್ದು ಇದು ಆಗಿನ ಕಾಲದ ಸಾಮಾಜಿಕ ವ್ಯವಸ್ಥೆಯನ್ನು ಪ್ರತಿಬಿಂಬಿಸುತ್ತದೆ. ಪತಿಯು ಕಾರಣಾಂತರಗಳಿಂದ ಮಡಿದಾಗ ಅವನ ಸತಿಯೂ ಕೂಡ ಬೆಂಕಿಗೆ ಬಿದ್ದು ಪ್ರಾಣವನ್ನು ಅರ್ಪಿಸುತ್ತಿದ್ದಳು. ಇದು ಅವಳ ಪತಿಭಕ್ತಿಯನ್ನು ತೋರಿಸುವ ಆಚರಣೆಯಾದರೂ ಇದರ ಹಿಂದೆ ಸಾಮಾಜಿಕ ಕಟ್ಟಳೆಗಳು, ಸಂಪ್ರದಾಯಗಳು, ಶೋಷಣೆಯ ಅಂಶಗಳು ಬಲವಾದ ಪ್ರೇರಣೆಯನ್ನು ನೀಡುತ್ತಿದ್ದವು. ಗಂಡನ ಹಿಂದೆಯೇ ಸತಿ ಹೋಗದವಳಿಗೆ ಸಮಾಜದಲ್ಲಿ ಅಷ್ಟಾಗಿ ಗೌರವವಿರಲಿಲ್ಲ.ಅಲ್ಲದೆ ಪ್ರಾಚೀನ ಕಾಲದಲ್ಲಿ ಪತಿಯಿಲ್ಲದೆ ಸತಿಗೆ ಬದುಕು ಹಾಗೂ ರಕ್ಷಣೆಗೆ ಅನ್ಯಮಾರ್ಗವಿಲ್ಲದೆ ಈ ರೀತಿ ಆಚರಣೆಯನ್ನು ಅನಿವಾರ್ಯವಾಗಿಯಾದರೂ ಆಚರಿಸಬೇಕಾಗಿತ್ತು.ಇದು ಒಂದು ರೀತಿ ಅಮಾನವೀಯ ಆಚರಣೆಯಾಗಿತ್ತೆಂದು ಹೇಳಬಹುದಾಗಿದೆ.ಇದು ಪುರುಷ ಪ್ರಧಾನ ಸಮಾಜ ಮಹಿಳೆಯರ ಮೇಲೆ ಮಾಡುವ ದೌರ್ಜನ್ಯವೆಂದು ವಿದ್ವಾಂಸರು ಅಭಿಪ್ರಾಯಪಟ್ಟಿದ್ದಾರೆ.ಇಂತಹ ಆಚರಣೆಯ ಬಗ್ಗೆ ತಿಳಿಸುವ ಮಾಸ್ತಿ ಮತ್ತು ವೀರಮಾಸ್ತಿ ಶಿಲ್ಪಗಳು ಇಂದು ಅಳಿವಿನಂಚಿನಲ್ಲಿವೆ. ಅವು ಪ್ರಾಚೀನ ಕಾಲದ ಆಚರಣೆಗಳು ಮಾತ್ರವಲ್ಲದೆ ಆಭರಣಗಳು,ಉಡುಗೆಗಳು, ಶಸ್ತ್ರಾಸ್ತ್ರಗಳು, ಸಾಂಕೇತಿಕವಾಗಿ ಬಳಸುತ್ತಿದ್ದ ವಸ್ತುಗಳು ಮುಂತಾದ ವಿಷಯಗಳ ಕುರಿತು ಮಾಹಿತಿನೀಡುವ ಪ್ರಮುಖ ಆಕರಗಳಾಗಿವೆ. ಎಲ್ಲಕ್ಕಿಂತ ಪ್ರಮುಖವಾಗಿ ಮಹಿಳೆಯು ಯಾವುದೇ ರೀತಿಯ ತ್ಯಾಗಕ್ಕೂ ಸಿದ್ಧಳಾಗಿದ್ದಳು ಮತ್ತು ಸಮಾಜದಲ್ಲಿರುವ ಸಂಪ್ರದಾಯಗಳನ್ನು ಆಕೆ ಗೌರವಿಸುತಿದ್ದಳು. ಇವತ್ತಿಗೂ ಕೆಲವು ಕಡೆ ಮಾಸ್ತಿ ಶಿಲ್ಪಗಳಿಗೆ ಗುಡಿಗಳನ್ನು ಕಟ್ಟಿ ಆರಾಧಿಸುವ ಸಂಪ್ರದಾಯವಿದೆ.ಇಂತಹ ಮಹತ್ವವಾದ ಶಿಲ್ಪಗಳನ್ನು ರಕ್ಷಿಸುವ ಜವಾಬ್ದಾರಿ ನಮ್ಮೆಲ್ಲರದಾಗಿದೆ.

## (ಆಕರ ಗ್ರಂಥಗಳು) Bibliography


1. Abee.J.A.Dubois, *Description of the Character, Mannes and Customs of the People of India and of their institutions religious and Civil*, Asian Educational Publishers, New Delhi 1989
2. Altekar.A.S., *Position of Women in Hindu Civilization*, Motilal Banarasidas,Delhi.1959
3. Aravamuttan.J.G., *Portrait Sculptures in South India*, The Indian Society,London,1931
4. Edward Thomson, *SUTTEE,A Historical and Philosophical enquiry into the rite of widow burning*,London,1928
5. Hunter.W.W., *The Indian Empire, its People, History and Products*, Trubner publishers, London -1886

6. Indra. M.A., *Status of Women in Ancient India*, Motilal Banarasidas,Banaras,1955
7. Kiran Devendra, *Status and Position of Women in India*,Vikas Pub.Pvt.Ltd, New Delhi-1990
8. Mrs. Marcus B. Fuller, *The Wrongs of Indian Womanhood,* Young people missionary, New York-1900
9. Kane, P.V. *History of Dharmashastras*,Vol-14,Bharndarkar Oriental Research Institute,Poona-1953
10. Settar.S. and Gunther D.Sonthemer. *The Memorial Stones*, Institute of Indian Art History, Karnatak University, Dharwad & South Asian Institute, University of Heidelberg,Germany-1982
11. ಕಲಬುರ್ಗಿ.ಎಂ.ಎಂ., **ಸಮಾಧಿ–ಬಲಿದಾನ ಮತ್ತು ವೀರಮರಣ ಸ್ಮಾರಕಗಳು**.ಐಬಿಎಚ ಪ್ರಕಾಶನ,ಬೆಂಗಳೂರು,೧೯೮೦
12. ಚಿದಾನಂದಮೂರ್ತಿ.ಎಂ, **ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ**,ಸಪ್ನ ಬುಕ್ಮ ಹೌಸ್,ಬೆಂಗಳೂರು–೨೦೧೧
13. ತಿಪ್ಪೇರುದ್ರದ್ವಾಮಿ.ಎಚ್., **ಕರ್ನಾಟಕ ಸಂಸ್ಕೃತಿ ಸಮೀಕ್ಷೆ**,ಡಿವಿಕೆ ಪ್ರಕಾಶನ,ಮೈಸೂರು,೨೦೦೩
14. ಪಮರಶಿವಮೂರ್ತಿ.ಡಿ.ವಿ.,**ಕನ್ನಡ ಶಾಸನ ಶಿಲ್ಪ**,ಕನ್ನಡ ವಿಶ್ವವಿದ್ಯಾಲಯ,ಹಂಪಿ,೨೦೦೮
15. ಶೇಷಾಶಾಸ್ತ್ರ.ಆರ್**.,ಶಾಸನ ಸಂಚಯ**,ಬೆಂಗಳೂರು ವಿಶ್ವವಿದ್ಯಾಲಯ,೧೯೮೨
16. ಶೇಠೆ.ಬಿ.ಎಸ್.,**ಕರ್ನಾಟಕದಲ್ಲಿ ಸತಿಪದ್ಧತಿ**,ವೀರಶೈವ ಅಧ್ಯಯನ ಅಕಾಡೆಮಿ,ಬೆಳಗಾವಿ,೧೯೯೧

# Publish Research Article

Dear Sir/Mam,

We invite unpublished Research Paper,Summary of Research Project,Theses,Books and Book Review for publication.

**Address:- North Asian International Research Journal Consortium (NAIRJC)**
**221, Gangoo Pulwama - 192301**
**Jammu & Kashmir, India**
**Cell: 09086405302, 09906662570,**
**Ph No: 01933212815**
**Email: nairjc5@gmail.com, info@nairjc.com**
**Website: www.nairjc.com**

